# ನಿಂಬಾಳದಲ್ಲಿ ಪುರಾತತ್ವ ಶೋಧನೆ: ಒಂದು ಅವಲೋಕನ

**ರವೀಂದ್ರ ಚವ್ಹಾಣ***

**DOI: https://doi.org/10.5281/zenodo.21253178**

**ABSTRACT**

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ನಿಂಬಾಳ ಗ್ರಾಮವು ಅಪಾರ ಐತಿಹಾಸಿಕ ಮತ್ತು ಪುರಾತತ್ವ ಮಹತ್ವವನ್ನು ಹೊಂದಿದೆ. ಇಲ್ಲಿನ ಪ್ರಮುಖ ಆಕರ್ಷಣೆಯಾದ ಕೋಟಿ ಶಂಕರ (ಶಂಕರಲಿಂಗೇಶ್ವರ) ದೇವಾಲಯವು ಕಲ್ಯಾಣ ಚಾಲುಕ್ಯರ ವಾಸ್ತುಶೈಲಿಗೆ ಅತ್ಯುತ್ತಮ ನಿದರ್ಶನವಾಗಿದೆ. ಈ ದೇವಾಲಯದ ಆವರಣದಲ್ಲಿ ದೊರೆತಿರುವ ೧೧ ರಿಂದ ೧೩ನೇ ಶತಮಾನದ ಕಳಚುರಿ, ಚಾಲುಕ್ಯ ಮತ್ತು ಯಾದವರ ಕಾಲದ ಶಿಲಾ ಹಾಗೂ ತಾಮ್ರ ಶಾಸನಗಳು ಅಂದಿನ ಕಾಲದ ಭೂದಾನ, ವ್ಯಾಪಾರ, ತೆರಿಗೆ ವಿನಾಯಿತಿ ಮತ್ತು 'ಅಯ್ಯಾಹೊಳೆ ೫೦೦' ವಾಣಿಜ್ಯ ಸಂಘಗಳ ಕೊಡುಗೆಗಳ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ಒದಗಿಸುತ್ತವೆ. ಗರ್ಭಗೃಹ, ವಿಶಾಲ ನವರಂಗ ಮತ್ತು ಸುಂದರವಾದ ಉಬ್ಬುಶಿಲ್ಪಗಳನ್ನು ಒಳಗೊಂಡ ಈ ದೇವಾಲಯದ ವಾಸ್ತುಶಿಲ್ಪ ಹಾಗೂ ಶಾಸನಗಳ ಸಮಗ್ರ ಅಧ್ಯಯನವು ಪ್ರಾಚೀನ ಕರ್ನಾಟಕದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಮೇಲೆ ಸ್ಪಷ್ಟ ಬೆಳಕು ಚೆಲ್ಲುತ್ತದೆ.

**KEYWORDS:** ನಿಂಬಾಳ, ಶಂಕರಲಿಂಗೇಶ್ವರ ದೇವಾಲಯ, ಪುರಾತತ್ವ ಶೋಧನೆ, ಶಾಸನಗಳು, ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪ.

* **ಡಾ. ರವೀಂದ್ರ ಚವ್ಹಾಣ,** ಟೀಚಿಂಗ್ ಅಸಿಸ್ಟೆಂಟ್, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ. ಪಿ. ಜಿ. ಹಳಕಟ್ಟಿ ಸ್ನಾತಕೋತ್ತರ ಕೇಂದ್ರ, ತೊರವಿ, ವಿಜಯಪುರ.

**ಪೀಠಿಕೆ:**

ವಿಜಯಪುರ ಜಿಲ್ಲೆಯು ಕರ್ನಾಟಕ ಇತಿಹಾಸದಲ್ಲೆ ಅಗ್ರಸ್ಥಾನವನ್ನು ಪಡೆದುಕೊಂಡಿದೆ. ಈ ಜಿಲ್ಲೆಯು ಐನೂರ್ವರು ವಾಣಿಜ್ಯ ಸಂಘಕ್ಕೂ ಪ್ರಸಿದ್ಧವಾಗಿದೆ. ಐಹೊಳೆಯನ್ನು ಕೇಂದ್ರಬಿಂದು ಮಾಡಿಕೊಂಡು ಈ ಸಂಘ ಭಾರತಾದ್ಯಂತ ತನ್ನ ಶಾಖೆಗಳನ್ನು ಹೊಂದಿತ್ತು. ಈ ಭಾಗದಲ್ಲಿ ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಯಾದವರು, ವಿಜಯನಗರ ಅರಸರು, ಆದಿಲ್ ಶಾಹಿಗಳು, ಸಾಮಂತ ದೊರೆಗಳು ಅಧಿಕಾರ ನಡೆಸುತ್ತಿದ್ದರು. ಈ ಭಾಗದಲ್ಲಿ ಐದು ನದಿಗಳು ಹರಿಯುತ್ತವೆ ಎಂಬ ಹೇಳಿಕೆಗಳಿವೆ. ಉದಾಹರಣೆ: ಕೃಷ್ಣ, ಭೀಮಾ, ಡೋಣಿ, ಘಟಪ್ರಭಾ ಮತ್ತು ಮಲಪ್ರಭಾ ನದಿಗಳಾಗಿವೆ. ಆದರೆ ಈಗ ವಿಜಯಪುರ ಜಿಲ್ಲೆಯು ಬೇರೆ ಬೇರೆಯಾಗಿದೆ. ಏಕೆಂದರೆ ಬಾಗಲಕೋಟೆಯು ಸಹ ವಿಜಯಪುರದ ಒಂದು ತಾಲೂಕು ಕೇಂದ್ರವಾಗಿತ್ತು. ಆದರೆ ಪ್ರಸ್ತುತ ಬಾಗಲಕೋಟೆ ಒಂದು ಜಿಲ್ಲೆಯಾಗಿದೆ. ಇಂಡಿ ತಾಲೂಕು ವಿಜಯಪುರ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದೆ. ಇಂಡಿಯು ಸಹ ಪ್ರಾಗೈತಿಹಾಸಿಕ ಕಾಲದಿಂದ ಇತಿಹಾಸ ಸ್ಥಾಪಿಸಿದೆ. ಇಂಡಿಗೆ ತನ್ನದೇ ಆದ ಪೂರ್ವ ಇತಿಹಾಸ ಇದೆ. ಇಂಡಿ ಎಂದರೆ ಹೂವಿನ ಗೊಂಚಲು ಅಥವಾ ಪುಷ್ಪಗುಚ್ಛ, ಕ್ರಿ.ಶ. 12ನೇ ಶತಮಾನದ ಕಾಲಕ್ಕೆ ಶಾಂತಯ್ಯನೆಂಬ ಶಿವಶರಣರು ಇಲ್ಲಿಂದ ಹೂವಿನ ಗೊಂಚಲನ್ನು ಪ್ರತಿನಿತ್ಯ ಬಸವಣ್ಣನವರ ಕಲ್ಯಾಣ ಅನುಭವಮಂಟಪಕ್ಕೆ ಕೊಡುತ್ತಿದ್ದನೆಂದು ಹೇಳಿಕೆಗಳಿವೆ. ಇಂಡಿ ತಾಲೂಕು 124 ಗ್ರಾಮಗಳನ್ನು ಹೊಂದಿದೆ (ಪ್ರಾಚೀನ ಗ್ರಾಮಗಳು) ಆದರೆ ಪ್ರಸ್ತುತ ನಿಂಬಾಳದಲ್ಲಿ ಪುರಾತತ್ವ ಶೋಧನೆ ಒಂದು ಅವಲೋಕನವನ್ನು ಕುರಿತು ಚರ್ಚಿಸಲಾಗಿದೆ.

ಗ್ರಾಮದ ಹೊರವಲಯದಲ್ಲಿ ಪ್ರಾಗೈತಿಹಾಸ ಕಾಲಕ್ಕೆ ಸೇರಿದ ಸೂಕ್ಷ್ಮಶಿಲಾಯುಗದ ಅವಶೇಷಗಳು ಕಂಡುಬರುತ್ತವೆ. ಪ್ರಸ್ತುತ ದೇವಾಲಯದ ಕೆಲವು ಭಾಗಗಳಲ್ಲಿ ಆವರಣದಲ್ಲಿ ಕಲಚುರಿ ಹಾಗೂ ಯಾದವರ ಕಾಲದ ಕೆಲವು ಶಾಸನಗಳಿವೆ ಅವುಗಳಲ್ಲಿ ಈ ಗ್ರಾಮವನ್ನು ನಿಂಬಹಳ್ಳ ಎಂದು ಹೇಳಲಾಗಿದೆ. ಈ ಗ್ರಾಮವು ಪುರಾತನ ಗ್ರಾಮವಾಗಿದೆ. ಇಲ್ಲಿ ಶಂಕರಲಿಂಗೇಶ್ವರ ದೇವಾಲಯ ಮತ್ತು ಶಾಸನಗಳು ಮತ್ತು ಪುರಾತನ ಅವಶೇಷಗಳು ಕಂಡು ಬರುತ್ತವೆ.

ಈ ಊರಿನ ಅಪ್ಪು ಗೌಡ ಪಾಟೀಲ್‌ರವರ ಪ್ರಕಾರ ಇದೊಂದು ಪ್ರಾಚೀನ ಕಾಲದ ದೇವಾಲಯವೆಂದೂ ತಿಳಿಸುತ್ತಾ, ಇಲ್ಲಿ ಕಲ್ಯಾಣದ ಚಾಲುಕ್ಯರ ದೊರೆಗಳು ಆಡಳಿತ ನಡೆಸಿರುವಂತಹ ನೆಲೆ ಎಂದು ತಿಳಿಸುತ್ತಾರೆ. ಇಲ್ಲಿರುವ ಅವಶೇಷಗಳನ್ನು ಗಮನಿಸಿದರೆ ಅವುಗಳು ಕಲ್ಯಾಣ ಚಾಲುಕ್ಯರ ಕಾಲದ ವಾಸ್ತು ಶೈಲಿಗೆ ಪೂರಕವಾಗಿರುತ್ತದೆ. ಅಣಿಸಿಯ ಊರ ಹೊರಗೆ ಇರುವ ನೆಲಮಾಳಸಿದ್ಧ ಅಥವಾ ವೀರ ಮುತ್ತೇಶ್ವರ ದೇವಾಲಯವಿದೆ. ಈ ದೇವಾಲಯಕ್ಕೆ ಮುಸ್ಲಿಂ ಶೈಲಿಯ ಕಂಬಗಳನ್ನು ಸೇರಿಸಲಾಗಿದೆ. ಇಲ್ಲಿ ಎರಡು ಮಾಲಗಂಬ ಹಾಗೂ 15 ಸಮಾಧಿಗಳಿವೆ. ಆದಕಾರಣ ಇದೊಂದು ಪ್ರಮುಖ ಐತಿಹಾಸಿಕ ನೆಲೆ ಎಂದು ಪರಿಗಣಿಸಬಹುದಾಗಿದೆ.

**ಶಂಕರಲಿಂಗೇಶ್ವರ ದೇವಾಲಯ – ನಿಂಬಾಳ:**

ಇಂಡಿ ತಾಲೂಕಿನ ನಿಂಬಾಳ ಗ್ರಾಮದಲ್ಲಿ ಸುಮಾರು 9 ಶಾಸನಗಳಿವೆ. ಅವುಗಳಲ್ಲಿ ಎಂಟು ಶಾಸನಗಳು ಗ್ರಾಮದ ಶಂಕರಲಿಂಗ ದೇವಾಲಯದ ಪರಿಸರದಲ್ಲಿವೆ. ಒಂದು ಅದೇ ಗ್ರಾಮದಲ್ಲಿ ದೊರೆತ ತಾಮ್ರ ಶಾಸನವಾಗಿದೆ.

ಶಂಕರಲಿಂಗ ಗುಡಿಯ ಆವರಣದಲ್ಲಿ ಬಿದ್ದಿರುವ ಕಲ್ಲಿನ ಮೇಲೆ ರಾಯಮುರಾರಿ ಸೋವಿದೇವ ವರ್ಷ 10, ದುರ್ಮತಿ ಚೈತ್ರ, ಸುಮಾರು 5 (ಸೌಮ್ಯವಾರ)ವೆಂದಿದೆ ಇದು ಕ್ರಿ.ಶ. 17–3–1176ರ ಬುಧವಾರಕ್ಕೆ ಸರಿ ಹೊಂದುತ್ತದೆ. ಸೋವಿದೇವನ ಮಹಾಮಂಡಳೇಶ್ವರನೊಬ್ಬನ ಹೆಸರು (ಹಾಳಾಗಿದೆ), ಸೋಮನಾಥ ದೇವರ ಅಪಾರ ಸಾಹಸ ಗುಣದಿಂದ ಕೂಡಿದ್ದನೆಂದೂ ಶಾಸನ ತಿಳಿಸುತ್ತದೆ. ಇವನು ಶಂಕರ ದೇವರಿಗೆ 200 ಮತ್ತರು ಭೂಮಿಯನ್ನು ದಾನ ಕೊಟ್ಟಂತೆ ತಿಳಿಯಬಹುದಾಗಿದೆ.

ಇನ್ನೊಂದು ಕಲ್ಲಿನ ಮೇಲೆ ಕಳಚೂರ್ಯ ಚಕ್ರವರ್ತಿ ವೀರ ತ್ರಿಭುವನ ಮಲ್ಲ ಬಿಜ್ಜಳನ ಉಲ್ಲೇಖವಿದೆ. ಇದು ಕ್ರಿ.ಶ. 12ನೆಯ ಶತಮಾನಕ್ಕೆ ಸೇರಿಸಬಹುದಾದ ಶಾಸನವಾಗಿದೆ. ಗುಣವಲಗೆಯ ಪ್ರಭುವಾದ ಬಮ್ಮರಸ ಕಲ್ಲೆಯ ನಾಯಕ ಮುಂತಾದ ಎಂಟುಹಿಟ್ಟು ಮೂಲಿಗ ಮುಂತಾದ ಸ್ಥಾನಮಾನದವರು ಊರ ಹೊಲದೊಳಗೆ ದೇವರ ಅಂಗಭೋಗ, ಧೂಪದೀಪಕ್ಕಾಗಿ 12 ಮತ್ತರು ಭೂಮಿಯನ್ನು ದಾನ ನೀಡಿರುವುದಾಗಿ ತಿಳಿದು ಬರುತ್ತದೆ. ಅಲ್ಲದೆ ಕೆಲವು ಸೀಮೆಯ ಉಲ್ಲೇಖವೂ ಇದೆ. ಈ ಸ್ಥಳ ತರ್ದವಾಡಿ ನಾಡಿಗೆ ಸೇರಿತ್ತೆಂದು ಶಾಸನ ಪಾಠದಿಂದ ತಿಳಿದು ಬಂದಿದೆ. ಮತ್ತೊಂದು ಕಲ್ಲು ಶಾಸನದ ಪ್ರಕಾರ ಸೋವಿದೇವ ವರ್ಷ 8 ಜಯ ಚೈತ್ರ ಸು.2 ಸೋಮವಾರವೆಂದಿದ್ದು ಇದು ಕ್ರಿ.ಶ. 6.3.1174ರಲ್ಲಿ ಬುಧವಾರಕ್ಕೆ ಸಮವಾಗಿರುತ್ತದೆ.

ತಡವಲಗೆಯ ಪ್ರಭು ವಾರರಸ ಬಸವರಸ, ಬೀಚರಸ ಭೂತರಸ, ಬಿಜ್ಜರಸ ಮುಂತಾದವರು ತಮ್ಮೂರ ಹೊಲದಲ್ಲಿ 25 ಮತ್ತರು ಭೂಮಿ ಒಂದು ಹುಣಸೆ ಮರ, ಒಂದು ನಿವೇಶನವನ್ನು ನಿಂಬಹಳ್ಳದ ಕೋಟಿ ಶಂಕರದೇವರಿಗೆ ಸರ್ವಬಾಧೆಯಾಗಿ ದಾನ ನೀಡಿದ ಉಲ್ಲೇಖವಿದೆ. ಅಲ್ಲದೆ ಗೋಣವಲಗೆಯಲ್ಲಿಯೂ ಒಂದು ನಿವೇಶನ ಮತ್ತು ಒಂದು ಹುಣಸೆಮರವನ್ನು ದಾನ ನೀಡಿದ ವಿಚಾರ ತಿಳಿದು ಬರುತ್ತದೆ.

ಶಂಕರಲಿಂಗ ಗುಡಿಯ ರಂಗಮಂಟಪದ ಪ್ರವೇಶದ್ವಾರದ ಎಡಗೋಡೆಗೆ ಸೇರಿಸಿರುವ ಕಲ್ಲಿನ ಮೇಲೆ ಈ ಶಾಸನದ ಕಾಲವು ಕ್ರಿ.ಶ. 13ನೇ ಶತಮಾನಕ್ಕೆ ಸೇರಿರುವ ಶಾಸನವಾಗಿದೆ. ಅಡಿಕೆ, ಭತ್ತವನ್ನು ಮಾರಿದಾಗ ಬರುವ ಹಣದಲ್ಲಿ ಇಂತಿಷ್ಟು ಹಣ ಮತ್ತು ವಸ್ತ್ರವನ್ನು ದಾನ ಕೊಡಬೇಕೆಂದು ಇದನ್ನು ಎಲ್ಲರೂ ಪಾಲಿಸಬೇಕೆಂದು ಹೇಳಿದೆ. ಶಂಕರಲಿಂಗ ಗುಡಿಯ ಪ್ರವೇಶದ್ವಾರದ ಕಮಾನಿನಾಕಾರದ ಛಾವಣಿಗೆ ಕೂರಿಸಿರುವ ಕಲ್ಲಿನ ಮೇಲೆ ಇರುವ ಶಾಸನವು ಕ್ರಿ.ಶ. 13ನೇ ಶತಮಾನಕ್ಕೆ 10 (ಮತ್ತರು) ಭೂಮಿ ಈ ಗುಡಿಗೆ ದಾನವಾಗಿ ಬಂದಿದ್ದು, ಇದಕ್ಕೆ ಯಾರಾದರೂ ಅನ್ಯಾಯ ಮಾಡಿದರೆ ಲಿಂಗಭೇದ ಮಾಡಿದರೆ ವಾರಣಾಸಿಯಲ್ಲಿ ಕವಿಲೆಯನ್ನು ಬ್ರಾಹ್ಮಣರನ್ನು ಕೊಂದ ದೋಷ ಬರುತ್ತದೆ ಎಂದು ತಿಳಿಸಲಾಗಿದೆ.

ಕಮಾನಿನಾಕಾರದ ಛಾವಣಿಗೆ ಕೂರಿಸಿರುವ ಕಲ್ಲಿನ ಮೇಲೆ ಕ್ರಿ.ಶ. 13ನೇ ಶತಮಾನಕ್ಕೆ ಸೇರಿದ ಶಾಸನವಿದೆ. ಈ ಶಾಸನ ಪ್ರಕಾರ ಶಂಕರಲಿಂಗ ಗುಡಿಗೆ ಹಿರಿಯ ಕೋಲು 244 ಮತ್ತರು ಭೂಮಿ ಒಂದು ನಿವೇಶನವನ್ನು ದಾನ ಬಿಡಲಾಗಿದೆ. ಇಷ್ಟೇ ಅಲ್ಲದೆ ಗಾಣವೊಂದಕ್ಕೆ ಅರ್ಧ ತೊಲಗು ಎಣ್ಣೆ ಹೆಡಗೆಗೆ 6 ಕಾಯಿ, ಕುದುರೆ ಮಾರಿದರೆ ಕೊಂಡರೆ ಇಂತಿಷ್ಟು ಹಣವೆಂದು ನಿಗದಿಪಡಿಸಲಾಗಿದೆ. ಕುರುಬರು ಒಂದು ಕಂಬಳಿ ನೀಡಬೇಕು ಎಂದು ತಿಳಿಸಿದೆ. ಶಾಸನ ಬಹುವಾಗಿ ಹಾಳಾಗಿರುವುದರಿಂದ ಹೆಚ್ಚಿನ ವಿವರಗಳು ತಿಳಿಯುವುದಿಲ್ಲ.

ಗ್ರಾಮದ ಶಂಕರಲಿಂಗಗುಡಿಯ ಪ್ರಾಕಾರದಲ್ಲಿ ಬಿದ್ದಿರುವ ಕಲ್ಲಿನ ಮೇಲೆ ಕ್ರಿ.ಶ. 13ನೆಯ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಇದರ ಪ್ರಕಾರ ಕೋಟಿ ಶಂಕರದೇವರಿಗೆ

ಭಕ್ತರಾದ ಸೋಮಯ್ಯನು ಗದ್ದೆಯ ಬಮ್ಮಯ್ಯನಿಗೆ ಒಂದು ತೋಟ 6 ಮತ್ತರು ಭೂಮಿ, ಧರ್ಮದ ಏತಕ್ಕೆ 6 ಮತ್ತು ಭೂಮಿ ಹೀಗೆ ಒಟ್ಟು ಹದಿನೆಂಟು ಮತ್ತರು ಭೂಮಿಯನ್ನು ಮತ್ತು ಹದಿನೆಂಟು ಕೈ ವಿಸ್ತೀರ್ಣದ ಮನೆಯ ನಿವೇಶನವನ್ನು ದಾನ ನೀಡಿದ ವಿಚಾರ ತಿಳಿದು ಬರುತ್ತದೆ.

ಅದು ಅಲ್ಲದೆ ನಿಂಬಾಳ್ ಗ್ರಾಮದಲ್ಲಿ ದೊರೆತ ತಾಮ್ರಶಾಸನವಿದೆ. ಈ ತಾಮ್ರಶಾಸನದ ಪ್ರಕಾರ ಲಿಪಿಯ ಆಧಾರದ ಮೇಲೆ ಇದರ ಕಾಲವನ್ನು ಕ್ರಿ.ಶ. 12ನೆಯ ಶತಮಾನಕ್ಕೆ ಸೇರಿಸಲಾಗಿದೆ. ವ್ಯಾಪಾರಿಗಳಿಗೆ ಸಂಬಂಧಿಸಿದ ಈ ಶಾಸನದ ಪ್ರಕಾರ ವೀರಬಣಂಜು ಧರ್ಮವನ್ನು ಪ್ರತಿಪಾಲಿಸುವ ಗುಡ್ಡದಧ್ವಜದಿಂದ ವಿರಾಜಿತರಾದ ಬಲದೇವ, ವಾಸುದೇವ, ಖಂಡಿಳಿ, ಮೂಲಭದ್ರರ ವಂಶೋದ್ಭವರಾದ 32 ಪುರಗಳು 16 ಪಟ್ಟಣಗಳು 64 ಯೋಗಪೀಠ 64 ಘಟಿಕಾಸ್ಥಾನಗಳಲ್ಲಿ ಓಡಾಡುವ ಭಲ್ಲುಂಕಿಂಡ ಹಸ್ತರಾದ ಅಯ್ಯಾಹೊಳೆ 500 ವ್ಯಾಪಾರಿಗಳ ಕುರಿತು ಹಾಗೂ ವ್ಯಾಪಾರಿಗಳು 36 ಬೀಡಿನ ಸೆಟ್ಟಿಗಳು ಮುಮ್ಮರಿ ದಂಡಹಸ್ತರಾದ ಅಯ್ಯಾಹೊಳೆ 500 ವ್ಯಾಪಾರಿಗಳನ್ನು ವರ್ಣಿಸಿದೆ. ಈ ವ್ಯಾಪಾರಿಗಳು 36 ಬೀಡಿನ ಸೆಟ್ಟಿಗಳು ಕೋಟಿ ಶಂಕರ ದೇವರ ಮಠದಲ್ಲಿ ಭಕ್ತ ಜನರಿಗೆ ನಡೆಸುವ ಛತ್ರದ ಆಹಾರ ದಾನಕ್ಕೆ ಹಾಗೂ ವೀರಗಣಗಳಿಗೆ ನಡೆಸುವ ಅನ್ನಛತ್ರಕ್ಕೆ ಮಠದ ಜೀರ್ಣೋದ್ಧಾರಕ್ಕೆಂದು ಕೋಟಿ ಶಂಕರದೇವರಿಗೆ ಕೆಲವು ದಾನಗಳನ್ನು ಬಿಟ್ಟಂತೆ ಉಲ್ಲೇಖವಿದೆ.

65 ಎತ್ತುಗಳನ್ನು ಮತ್ತು ಭಂಡಿ ದೋಣಿಗಳಿಗೆ ಏನನ್ನು ತುಂಬಿದರೂ ವೀರವಣ ಹೆಜ್ಜೆಂಕ ಬಿಲುಕೊಡೆ ಪದ್ದರಾಉಳ ಮುಂತಾದ ತೆರಿಗೆಗಳನ್ನು ಬಿಟ್ಟಾರು ಕೊನೆಯ ಹಲಗೆಯಲ್ಲಿ ಅಕ್ಷರಗಳಲ್ಲಿ ದಪ್ಪನಾಗಿ ಬರೆಯಲಾಗಿದೆ. ಶಾಸನ ಪಾಠದ ಪ್ರಾರಂಭದಲ್ಲಿ ಲಿಂಗ ಹಾಲು ಕುಡಿಸುವ ಹಸು, ಮೌರ್ಯ, ಚಂದ್ರರ ರೇಖಾಚಿತ್ರವನ್ನು ಬರೆಯಲಾಗಿದೆ.

ಈ ಮೇಲಿನ ಎಲ್ಲಾ ಶಾಸನಗಳನ್ನು ಗಮನಿಸಿದರೆ ನಿಂಬಾಳ ಗ್ರಾಮದ ದೇವಾಲಯವು ಕ್ರಿ.ಶ. 11ನೆಯ ಶತಮಾನದಿಂದ 13–14ನೆಯ ಶತಮಾನದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ನಡೆದಿರುವುದು ತಿಳಿದು ಬರುತ್ತದೆ.

ಇಂಡಿಯಿಂದ ಸುಮಾರು 26 ಕಿಲೋಮೀಟರ್ ದೂರದಲ್ಲಿರುವ ನಿಂಬಾಳ ತನ್ನದೇ ಆದ ಹೆಸರು ಗಳಿಸಿದೆ. ಈ ಊರು ಹಿಂದೆ ಅಂಕಲಿಗೆ 50 ರಲ್ಲಿದ್ದ ಪ್ರಾಚೀನ ಸ್ಥಳ. ಇಲ್ಲಿರುವ ಶಂಕರಲಿಂಗ ದೇವಾಲಯವನ್ನು ಶಾಸನದ ಪ್ರಕಾರ ಕೋಟಿ ಶಂಕರ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಸುಂದರವಾದ ವಾಸ್ತುರಚನೆಯನ್ನು ಹೊಂದಿರುವ ದೇವಾಲಯವಾಗಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಅರ್ಧಮಂಟಪ ವಿಶಾಲವಾದ ನವರಂಗವನ್ನು ಹಾಗೂ ಅಲಂಕೃತ ಸ್ತಂಭಗಳಿರುವ ಮುಖ ಮಂಟಪಗಳಿವೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮೂಲಗರ್ಭ ಗರ್ಭಗೃಹದಲ್ಲಿ ಪ್ರಾಚೀನ ಕಾಲದ ಪಾಣಿಪೀಠದ ಮೇಲೆ ಎತ್ತರವಾದ ಬಾಣಲಿಂಗವನ್ನು ಹೊಂದಿದೆ. ಗರ್ಭಗೃಹದ ಬಾಗಿಲವಾಡವು ಕಲ್ಯಾಣಿ ಚಾಲುಕ್ಯರ ಶೈಲಿಯ ಅಲಂಕಾರವನ್ನು ಪಡೆದುಕೊಂಡಿದೆ ಹಾಗೂ ಲತೆ, ಬಳ್ಳಿ, ಸುರುಳಿ ಕೆತ್ತನೆಯನ್ನು ಹೊಂದಿದೆ. ಅರ್ಧಮಂಟಪದ ಬಾಗಿಲವಾಡದ ಮೆಲ್ಭಾಗದಲ್ಲಿ ಮಕರ ತೋರಣಗಳ ಅಲಂಕಾರವಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಸುಂದರವಾಗಿರುವ ಭುವನೇಶ್ವರಿದೇವಿ ಕೆತ್ತಲಾಗಿದೆ. ಗರ್ಭಗೃಹದ ಮುಂದೆ ಅರ್ಧಮಂಟಪವಿದೆ. ಅರ್ಧಮಂಟಪವು ಸರಳವಾಗಿದ್ದು, ಗರ್ಭಗೃಹದ ಮಾದರಿಯಲ್ಲಿಯೇ ಭುವನೇಶ್ವರಿಯನ್ನು ಹೊಂದಿದೆ. ನವರಂಗವೂ

ವಿಶಾಲವಾಗಿದ್ದು ನವರಂಗಕ್ಕೆ ಮೂರು ಪ್ರವೇಶದ್ವಾರಗಳಿವೆ. ಎರಡೂ ಕಡೆ ಕಕ್ಷಾಸನವಿರುವ ಚಿಕ್ಕ ಮುಖಮಂಟಪಗಳಿವೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳು ಸುಂದರವಾಗಿ ಅಲಂಕಾರಗಳನ್ನು ಹೊಂದಿದೆ. ಈ ನಾಲ್ಕು ಕಂಬಗಳ ಮಧ್ಯದಲ್ಲಿ ನಾಟ್ಯ ಪೀಠವಿದೆ ಇದರ ಕೆಳಮುಖ ಮಾಡಿರುವ ಕಮಲದ ಅಲಂಕಾರವಿದೆ. ನವರಂಗದ ಮುಂದೆ ಮುಖಮಂಟಪ, ಈ ಮುಖಮಂಟಪದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಉಬ್ಬು ಶಿಲ್ಪಗಳಿವೆ. ಅದರ ಮುಂದೆ ಮತ್ತೊಂದು ಮುಖಮಂಟಪವಿದೆ. ಈ ಮುಖಮಂಟಪಕ್ಕೆ 4+4=8 ಕಂಬಗಳನ್ನು ಸೇರಿಸಲಾಗಿದೆ.

ಈ ದೇವಾಲಯದ ಸುತ್ತಲೂ ಕಕ್ಷಾಸನದ ಹೊರಭಾಗದ ಕಿರುಗೋಡೆಗಳಲ್ಲಿ ಸುಂದರ ಶಿಲ್ಪಗಳಿವೆ. ಒಟ್ಟು 23 ಶಿಲ್ಪಗಳಿವೆ. ಅವುಗಳಲ್ಲಿ ಭಿಕ್ಷಾಟನೆ ಶಿವ, ವರಾಹ, ಗಣಪ, ಶಾಸನ ಸುಂದರಿ, ಸಂಗೀತಗಾರರು, ಕೊಳಲು ವಾದಕರು, ನೃತ್ಯಭಂಗಿಯಲ್ಲಿರುವ ನರ್ತಕಿಯರು ಭೃಂಗಿ ಮುಂತಾದ ಶಿಲ್ಪಗಳು ದೇವಾಲಯದ ಹೊರಗೋಡೆಗಳಲ್ಲಿ ಭಿತ್ತಿಯ ಭಾಗದಲ್ಲಿ ಕತ್ತರಿಸಲಾಗಿರುವುದು ಕಂಡುಬರುತ್ತದೆ. ಕೋಟಿ ಶಂಕರ ದೇವಾಲಯವು ಕೇಂದ್ರ ಪುರಾತತ್ವ ಇಲಾಖೆಯ ಸಂರಕ್ಷಣೆಗೆ ಒಳಪಟ್ಟಿದೆ. ಈ ದೇವಾಲಯದ ಅಲ್ಲಿನ ಶಾಸನಗಳ ಕುರಿತು ಮೇಲೆ ಚರ್ಚಿಸಲಾಗಿದೆ. ಕ್ರಿ.ಶ. 1174ರಲ್ಲಿ ಶಾಸನದಲ್ಲಿ ಕೋಟಿ ಶಂಕರ ದೇವರಿಗೆ ಬೊಮ್ಮರಸ, ಮೂಲಿಗ, ಗೋಣವಲಿಗ ಪ್ರಭು ಐಚಕಲ್ಲೆಯ ನಾಯಕರಿಂದ ಭೂದಾನ ಮತ್ತು ತರ್ದವಾಡಿ ನಾಡಿನ ಉಲ್ಲೇಖವಿದೆ. ಕ್ರಿ.ಶ. 1186ರ ಕಲಚೂರಿಯ ಸಂಕಮನ ಶಾಸನದಲ್ಲಿ ಕೋಟಿ ಲಿಂಗೇಶ್ವರ ದೇವಾಲಯಕ್ಕಾಗಿ ತರ್ದವಾಡಿ ಕಂಪಣದ ಅಂಕಲಿಗೆ 50 ರಲ್ಲಿಯ ಒಬ್ಬಲವಾಡ ಗ್ರಾಮ ದಾನವನ್ನು ಉಲ್ಲೇಖಿಸುತ್ತದೆ. ಹಾಗೆಯೇ ಕ್ರಿ.ಶ. 12ನೆಯ ಶತಮಾನದ ಲಕ್ಷಣವುಳ್ಳ ತಾಮ್ರಶಾಸನ ಆಯ್ಯಾಹೊಳೆ ಐನೂರು ಸ್ವಾಮಿಗಳು ಮತ್ತು ಇತರ ವ್ಯಾಪಾರಿ ಸಂಘಗಳು ನಿಂಬಹಳ್ಳದ ಕೋಟಿ ಶಂಕರ ದೇವಾಲಯಕ್ಕೆ ನೀಡಿದ ಸುಂಕವನ್ನು ತಿಳಿಸುತ್ತದೆ. ಈ ದೇವಾಲಯದ ಮುಂದೆ ಒಂದು ಮುಖಮಂಟಪವಿದೆ. ಈ ಮುಖಮಂಟಪದಲ್ಲಿ ಸುತ್ತಲೂ ಎಂಟು ಆನೆಮುಖಗಳಿರುವ ಮುಖವಾಡವನ್ನು ನೀಡಲಾಗಿದೆ. ಪ್ರಾಯಶಃ ಇದರಿಂದ ಅಂದಿನ ಕಾಲದಲ್ಲಿ ಕಲ್ಯಾಣಿ ಚಾಲುಕ್ಯರ ಶಕ್ತಿಯ ಪ್ರದರ್ಶನದ ಹಿನ್ನಲೆ ಇರಬೇಕು. ಈ ದೇವಾಲಯಕ್ಕೆ ಪೂರಕವಾಗಿ ಶ್ರಾವಣ ಮಾಸದಲ್ಲಿ ಭಾರಿ ಜಾತ್ರೆ ನಡೆಯುತ್ತದೆ.

**ಪರಾಮರ್ಶನ ಗ್ರಂಥಗಳು:**


1. ರಾಬರ್ಟ್ ಬ್ರೂಸ್ ಫೂಟ್, (1873), ಪುರಾತತ್ವ ನೆಲೆ ಶೋಧನೆ, ಕಲ್ಕತ್ತಾ: ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆ (Geological Survey of India).
2. ವೀರೇಂದ್ರ ಶಿಂಪಿ, (1987), ಇಂಡಿ ತಾಲೂಕು ದರ್ಶನ, ಬೆಂಗಳೂರು: ಐಬಿಎಚ್ ಪ್ರಕಾಶನ.
3. ಕಲಬುರ್ಗಿ ಎಂ.ಎಂ., (1976), ವಿಜಯಪುರ ಜಿಲ್ಲೆಯ ಶಾಸನ ಸೂಚಿ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
4. ಸುಂದರ ಅ., (1971), ಇತಿಹಾಸ ಪೂರ್ವ ಕರ್ನಾಟಕದ ಪ್ರಾಗಿತಿಹಾಸ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
5. Padmanabha P., (1973), Bijapura District Hand Book, Bangalore: Govt. of Karnataka.
6. Satya B. N., (1966), Mysore State Gazetteer: Bijapura District, Bangalore: Govt. Press.